ಈ ಪ್ರಶ್ನಾಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : 67) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : 68) ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ಉತ್ತರಿಸಬೇಕು. ಅಭ್ಯರ್ಥಿಗಳು ತಾವು ಆಯ್ಕೆ ಮಾಡಿ, ಉತ್ತರಿಸುವ ವಿಷಯ ಸಂಕೇತವನ್ನು ಕಡ್ಡಾಯವಾಗಿ ಓ.ಎಂ.ಆರ್. ಮೇಲೆ ನಿಗದಿತ ಸ್ಥಳದಲ್ಲಿ ನಮೋದಿಸತಕ್ಕದ್ದು.

**ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**ಸಬ್ಜೆಕ್ಟ ಕೋಡ್**
**67**

**2015**

**ಪ್ರಶ್ನೆ ಪುಸ್ತಿಕೆ**

**ಸಾಮಾನ್ಯ ಕನ್ನಡ**

FDA

**ವರ್ಷನ್ ಕೋಡ್**
**D**

**ಸಮಯ : 1 ½ ಗಂಟೆಗಳು**

**ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಓ.ಎಂ.ಆರ್. ಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಎನ್ ಕೋಡ್ ಮಾಡುವ ಮೊದಲು ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆಪುಸ್ತಿಕೆಯ ವರ್ಷನ್ ಕೋಡ್ A, B, C, ಅಥವಾ D ಅನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ **ಬೇರೆ ಏನನ್ನೂ ಬರೆಯಬಾರದು**.

| ನೋಂದಣಿ ಸಂಖ್ಯೆ |
|---|
| 1015183 |

4. ಈ ಪ್ರಶ್ನೆಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು **ಕೇವಲ ಒಂದು ಉತ್ತರವನ್ನು** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಪತ್ರಿಕೆಯ ಮೇಲೆ ಕೇವಲ **ಕಪ್ಪು** ಅಥವಾ **ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ ಮಾತ್ರ** ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೂ** ಉತ್ತರಿಸಿರಿ. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು **ನೋಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್** ಇತ್ಯಾದಿಗಳನ್ನು (ನಿಮ್ಮ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**Note :** English version of the instructions is printed on the back cover of this Booklet.



www.shikarat.com

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ 1-3) ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರುತಿಸಿ ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ ಆಗ (4)ನ್ನು ಗುರುತಿಸಿ.

ಉದಾಹರಣೆ : ಮಕ್ಕಳು ಸಂಗೀತವನ್ನು ಸುಶ್ರಾವ್ಯವಾಗಿ ಆಡಿದರು.

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಆಲಿಸಿದರು

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು ಆದುದರಿಂದ (1)ನ್ನು ಗುರುತಿಸಬೇಕು.

1. ಹುಡುಗರು ಆ ನಾಯಿಗೆ ಅಟ್ಟಿದರು

(1) ನಾಯಿಯ

(2) ನಾಯಿ

(3) ನಾಯಿಯನ್ನು

(4) ಸುಧಾರಣೆ ಬೇಕಿಲ್ಲ

2. ಗುಡಿ ಕೈಗಾರಿಕೆಗಳು ಕಚ್ಚಾಪದಾರ್ಥಗಳ ಕೊರತೆಯಿಂದ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು

(1) ಕಚ್ಛಾಪದಾರ್ಥ

(2) ಕಚ್ಚಾಪದಾರ್ಥ

(3) ಕಚ್ಛಾಪದಾರ್ತ

(4) ಸುಧಾರಣೆ ಬೇಕಿಲ್ಲ

3. ಒಟ್ಟಿನಲ್ಲಿ ಆ ಇತ್ತ್ಯರ್ಥವನ್ನು ಹೀಗೆ ವಿವರಿಸಬಹುದು.

(1) ಇತ್ಯರ್ಥ

(2) ಇತ್ಯರ್ತ

(3) ಇತ್ತರ್ಥ

(4) ಸುದಾರಣೆ ಬೇಕಿಲ್ಲ

**ಸೂಚನೆ :** ಕೆಳಗಿನವುಗಳಲ್ಲಿ (ಪ್ರಶ್ನೆಸಂಖ್ಯೆ 4-8) ಗೆರೆಹಾಕಿದ ಭಾಗಗಳು ತಪ್ಪಾಗಿವೆ ಅವುಗಳ ಮುಂದೆ ಕೊಟ್ಟ ನಾಲ್ಕು ಪರ್ಯಾಯ ರೂಪಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ.

ಉದಾಹರಣೆ : ಕುವೆಂಪು ಚೋಮನ ದುಡಿ ಎಂಬ ಕಾದಂಬರಿಯನ್ನು ರಚಿಸಿದ್ದಾರೆ.

(1) ಬೆಟ್ಟದ ಜೀವ

(2) ಕಾನೂರ ಹೆಗ್ಗಡತಿ

(3) ಚಿಕ್ಕವೀರ ರಾಜೇಂದ್ರ

(4) ದುರ್ಗಾಸ್ತಮಾನ

ಇಲ್ಲಿ "ಕಾನೂರ ಹೆಗ್ಗಡತಿ" ಸರಿಯಾದ ಉತ್ತರ ಆದುದರಿಂದ (2)ನ್ನು ಗುರುತಿಸಬೇಕು.

4. ಕನ್ನಡದ ಮೊಟ್ಟಮೊದಲ ತ್ರಿಪದಿರೂಪ ಜಿನವಲ್ಲಭನ ಶಾಸನದಲ್ಲಿ ಸಿಗುತ್ತದೆ.

(1) ಹಲ್ಮಿಡಿ ಶಾಸನ

(2) ಬಾದಾಮಿ ಶಾಸನ

(3) ಆತಕೂರು ಶಾಸನ

(4) ಚಾವುಂಡರಾಯ ಶಾಸನ



www.shikarat.com

5. ಹಲ್ಮಿಡಿ ಶಾಸನ ಹಳಗನ್ನಡ ಭಾಷಾ ರೂಪದಲ್ಲಿದೆ

(1) ನಡುಗನ್ನಡ

(2) ಹೊಸಗನ್ನಡ

(3) ಪೂರ್ವದ ಹಳೆಗನ್ನಡ

(4) ಪುರಾತನ ಕನ್ನಡ

6. ಕನ್ನಡದಲ್ಲಿ ಮೊಟ್ಟಮೊದಲು ಸರಸ್ವತಿ ಸನ್ಮಾನ್ ಪಡೆದ ಸಾಹಿತಿ ಕುವೆಂಪು

(1) ಬೇಂದ್ರೆ

(2) ಶಿವರಾಮಕಾರಂತ

(3) ಎಸ್.ಎಲ್.ಭೈರಪ್ಪ

(4) ಯು.ಆರ್.ಅನಂತಮೂರ್ತಿ

7. ಉರಿಯ ನಾಲಿಗೆ ಇದು ಹಾ.ಮಾ.ನ.ರವರ ಕೃತಿ

(1) ಪಿ ಲಂಕೇಶ್

(2) ಯು.ಆರ್.ಅನಂತಮೂರ್ತಿ

(3) ರಾಮಚಂದ್ರಶರ್ಮ

(4) ಕೀರ್ತಿನಾಥ ಕುರ್ತುಕೋಟಿ

8. ಹಗಲುಗನಸುಗಳು ಕೃತಿಯ ಕರ್ತೃ ಚಂದ್ರಶೇಖರ ಕಂಬಾರ

(1) ಜಿ.ಎಸ್.ಶಿವರುದ್ರಪ್ಪ

(2) ಕೀರ್ತಿನಾಥ ಕುರ್ತುಕೋಟಿ

(3) ಎ.ಎನ್.ಮೂರ್ತಿರಾವ್

(4) ಗೋಪಾಲ ಕೃಷ್ಣ ಅಡಿಗ

**ಸೂಚನೆ :** ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ 9–16) ಪದಗಳು ಕ್ರಮಬದ್ಧವಾಗಿಲ್ಲ ಅವು ಅರ್ಥಪೂರ್ಣವಾಗುವಂತೆ ಗೆರೆಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ ಅವುಗಳ ಅನುಕ್ರಮವನ್ನು ಗುರುತಿಸಿ.

ಉದಾಹರಣೆ :

ವಿದ್ಯಾರ್ಥಿಗಳು (P) ಜಾಸ್ತಿಯಾಗಿದೆ (Q)

ಆಕರ್ಷಿತರಾಗುತ್ತಿರುವುದು (R)

ದುರಭ್ಯಾಸಗಳ ಕಡೆಗೆ (S)

(1) P S R Q

(2) Q R S P

(3) S Q R P

(4) Q S R P

ಇಲ್ಲಿ P S R Q ಎಂಬುದು ಸರಿಯಾದ ಜೋಡಣೆಯ ಕ್ರಮ ಆದುದರಿಂದ ಇಲ್ಲಿ (1)ನ್ನು ಗುರುತಿಸಬೇಕು.

9. ಸಾಮೂಹಿಕ ಶಿಸ್ತು (P) ಏಕರೂಪದ ಆಚರಣೆ (Q)

ಯಲ್ಲ (R) ಎಂದರೆ ವಿವೇಚನಾರಹಿತ (S)

(1) P Q R S

(2) P S Q R

(3) P R S Q

(4) S R Q P



www.shikaral.com

10. ಜೀವನ ಸಂಸ್ಕೃತಿವಂತ ನಡೆಯುತ್ತದೆ

P Q R

ಗುರಿಯರಿತು

S

(1) Q P S R

(2) P Q R S

(3) S R Q P

(4) R Q P S

11. ಪ್ರಸ್ತುತ ಸಂದರ್ಭದ ಕನ್ನಡದಲ್ಲಿ

P Q

ಚಿಂತಕರಲ್ಲೊಬ್ಬರು ಮಹತ್ವದ

R S

(1) P Q R S

(2) Q P S R

(3) S R Q P

(4) R S P Q

12. ಎಂತಹ ಭಯಂಕರ ಕಾದಿದೆಯೊ ನಿಮಗೆ

P Q

ಹೋರಾಟ ಆ ಕಾಲ ಪುರುಷನೇ ಬಲ್ಲ

R S

(1) P Q R S

(2) Q R P S

(3) S R Q P

(4) P R Q S

13. ಮಾಡಬೇಕು ವಿದ್ಯೆ ವಿಚಾರವಂತರನ್ನಾಗಿ

P Q R

ಮನುಷ್ಯನನ್ನು

S

(1) P Q R S

(2) Q S R P

(3) R Q P S

(4) Q S P R

14. ಪ್ರಸಿದ್ಧವಾಗಿದೆ ದಕ್ಷಿಣಕಾಶಿ ಎಂದು

P Q R

ನಂಜನಗೂಡು

S

(1) P Q R S

(2) S Q R P

(3) Q R P S

(4) R Q P S

15. ಅಕ್ಷರಸ್ಥರಾಗುತ್ತಿದ್ದಾರೆ ವಿದ್ಯಾವಂತರು

P Q

ಕೇವಲ ಇತ್ತೀಚಿನ ದಿನಗಳಲ್ಲಿ

R S

(1) P Q R S

(2) P Q S R

(3) S P Q R

(4) Q S R P

16. ಸಂಸ್ಕೃತಿವಂತ ರಾಷ್ಟ್ರಜೀವನ ಸಾಧಿಸುವು (P) ದಾಗಿರಬೇಕು (Q) ಮಾನವ ಕುಲದ (R) ಗುರಿಯನ್ನು (S)

(1) P Q R S

(2) P R S Q

(3) R Q S P

(4) S R Q P

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ 17-22) (1), (2), (3) ಎಂಬ ಗೆರೆ ಎಳೆದ ಭಾಗಗಳವೆ ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರುತಿಸಿ ಯಾವ ಭಾಗದಲ್ಲೂ ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ (4) ನೇ ಭಾಗವನ್ನು ಗುರುತಿಸಿ.

ಉದಾಹರಣೆ : ವಿದ್ಯಾರ್ಥಿಗಳು (1) ಶಾಲೆಗೆ (2) ಮುಗಿಸಿಕೊಂಡು ಬಂದರು (3) ತಪ್ಪಿಲ್ಲ (4)

ಇಲ್ಲಿ ಭಾಗ (2) ರಲ್ಲಿ "ಶಾಲೆಯನ್ನು" ಎಂದಿರ ಬೇಕಾಗಿತ್ತು ಈ ಭಾಗದಲ್ಲಿ ದೋಷವಿರುವುದರಿಂದ ಇಲ್ಲಿ (2)ನ್ನು ಗುರುತಿಸಬೇಕು.

17. ವಚನಗಳು (1) ಕನ್ನಡ (2) ಉಪನಿಷತ್ತುಗಳು (3) ತಪ್ಪಿಲ್ಲ (4)

18. ಅಬ್ದುಲ್ ಕಲಾಂರವರು (1) ನಮ್ಮ ದೇಶ (2) ಕ್ಷಿಪಣಿ ಪಿತಾಮಹರು (3) ತಪ್ಪಿಲ್ಲ (4)

19. ಪಂಪನು ಕನ್ನಡ ಸಾಹಿತ್ಯ (1) ಪರಂಪರೆಯ (2) ನಿರ್ಮಾಪಕ (3) ತಪ್ಪಿಲ್ಲ (4)

20. ಅದ್ಯಾಪಕರು (1) ವಿದ್ಯಾರ್ಥಿಗಳಗೆ (2) ಮಾದರಿಯಾಗಿರಬೇಕು (3) ತಪ್ಪಿಲ್ಲ (4)

21. ಮೈಸೂರಿನ (1) ಅರಮಣೆ (2) ಜಗತ್ಪ್ರಸಿದ್ಧವಾದುದು (3) ತಪ್ಪಿಲ್ಲ (4)

22. ಗಾಯಕ (1) ಹಾಡನ್ನು ಹೇಳಲು (2) ತೊಡಗಿಸಿದ (3) ತಪ್ಪಿಲ್ಲ (4)

www.shikarat.com

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆಸಂಖ್ಯೆ 23-28) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಇಂಗ್ಲೀಷ್ ರೂಪಕ್ಕೆ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.

ಉದಾಹರಣೆ : ಹೆದ್ದಾರಿಯಲ್ಲಿ ಕಾರೊಂದು ಆಕ್ಸಿಡೆಂಟ್ ಗೊಳಗಾಯಿತು.

(1) ಪ್ರಮಾದ

(2) ಅಪಘಾತ

(3) ವಿಪತ್ತು

(4) ಅಕಸ್ಮಾತ್

ಇಲ್ಲಿ "ಅಪಘಾತ" ಎಂಬುದು ಸೂಕ್ತ ರೂಪವಾದುದರಿಂದ (2)ನ್ನು ಗುರುತಿಸಬೇಕು.

23. ಈ ಹಾಡಿನ ಕಾಂಪೋಝಿಶನ್ ತುಂಬಾ ಚೆನ್ನಾಗಿದೆ.

(1) ಸರಿಗಮ

(2) ಸಂಯೋಜನೆ

(3) ನಿರ್ದೇಶನ

(4) ಗಾಯನ

24. ಯಾವುದೇ ಚಲನಚಿತ್ರದ ಯಶಸ್ಸು ಆ ಚಿತ್ರದ ಡೈರೆಕ್ಷನ್ ಮೇಲೆ ನಿಂತಿರುತ್ತದೆ.

(1) ಸಂಯೋಗ

(2) ಸಂಯೋಝನೆ

(3) ಹಾಡು

(4) ನಿರ್ದೇಶನ

25. ವ್ಯಾಪಾರಿಗಳು ಯುಗಾದಿ ಹಬ್ಬದ ಸಂದರ್ಭದಲ್ಲಿ ಎಲ್ಲಾ ವಸ್ತುಗಳ ಮೇಲೆ "ಡಿಸ್ಕೌಂಟ್"ನ್ನು ಕೊಡುವುದು ಸಾಮಾನ್ಯ ವಿಷಯ.

(1) ಉಚಿತ

(2) ರಿಯಾಯಿತಿ

(3) ಕಡಿಮೆ ಬೆಲೆ

(4) ಸಾಲ

26. ದೇಶದ ಆರ್ಥಿಕತೆಯ ಮೇಲೆ ಭ್ರಷ್ಟಾಚಾರದಿಂದಾಗುವ ಪರಿಣಾಮವನ್ನು ಇಮ್ಯಾಜಿನ್ ಮಾಡಿಕೊಳ್ಳಲು ಸಾಧ್ಯವಿಲ್ಲ

(1) ದುರಂತ

(2) ಊಹಿಸು

(3) ನಾಶ

(4) ಅಪಘಾತ

27. ಚಾನ್ಸಲರ್ ರವರು ಒಂದು ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿರುತ್ತಾರೆ.

(1) ಕುಲಸಚಿವ

(2) ನಿರ್ದೇಶಕ

(3) ಕುಲಪತಿ

(4) ಪ್ರಾಚಾರ್ಯ

28. ಪಾಶ್ಚಾತ್ಯೀಕರಣದ ಪ್ರಭಾವದಿಂದ ರಿಲೇಶನಗಳು ತುಂಬಾ ಯಾಂತ್ರಿಕವಾಗುತ್ತಿವೆ.

(1) ವ್ಯವಹಾರಗಳು

(2) ಮಾತುಕತೆ

(3) ವರ್ತನೆಗಳು

(4) ಸಂಬಂಧ



www.shikarat.com

**ಸೂಚನೆ :** ಈ ಕೆಳಗೆ (ಪ್ರಶ್ನೆಸಂಖ್ಯೆ 29-31) PQRS ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.

ಉದಾಹರಣೆ :

P. ಪುಲಿಗೆರೆ. ಕಿಸುವೊಳಲ್. ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡ ನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) Q S R P

(2) S R Q P

(3) P Q R S

(4) R P Q S

ಇಲ್ಲಿ ಸರಿಯಾದ ಉತ್ತರ Q S R P ಆದುದರಿಂದ (1)ಅನ್ನು ಗುರುತಿಸಬೇಕು.

29. P. ಆದರೆ ಖಂಡಿತವಾಗಿಯೂ ಅದು ತಪ್ಪು ಅರ್ಥ

Q. ಒಂದು ರಾಜ್ಯಶಾಸ್ತ್ರದ ಪುಸ್ತಕ ಸುಮ್ಮನೆ ಪ್ರಸ್ತಾಪಿಸಿ ಅದರ ಅಧಿಕಾರಗಳು ರಾಜನ ಮೂಲಕ ಬರುತ್ತವೆ ಎಂದು ಹೇಳುತ್ತದೆ.

R. ಹೆಚ್ಚಿನ ರಾಜ್ಯಗಳಲ್ಲಿ ಅದನ್ನು ಸರಕಾರಿ ಯಂತ್ರದ ಭಾಗವೆಂದು ಪರಿಗಣಿಸಿರಲಿಲ್ಲ.

S. ಹಳ್ಳಿಯ ಪರಿಷತ್ತು ಖಂಡಿತವಾಗಿ ಭಾರತದ ಎಲ್ಲಾ ಕಡೆಗೆ ಇದ್ದಿತಾದರೂ ಅದರ ಉಲ್ಲೇಖ ಕಡಿಮೆ

(1) Q R S P

(2) R S Q P

(3) S R Q P

(4) P Q R S

30. P. ತಪ್ಪು ದಾರಿ ಹಿಡಿದ ಹೆಂಡತಿ ತನ್ನ ಅಧಿಕಾರಗಳನ್ನು ಕಳೆದುಕೊಳ್ಳುತ್ತಿದ್ದಳು.

Q. ಧರ್ಮಶಾಸ್ತ್ರದ ದೃಷ್ಟಿಯಿಂದ ಮದುವೆಯಲ್ಲಿ ಒಂದು ಸಲ ಸಪ್ತಪದಿಯನ್ನು ಜೊತೆಯಾಗಿ ತುಳಿದ ಮೇಲೆ ಬೇರ್ಪಡಿಸಲಾಗುತ್ತಿರಲಿಲ್ಲ.

R. ವಿಚ್ಛೇದನ ತೀರ ಅಸಂಭವವಾಗಿತ್ತು.

S. ನಿಷೇಧವಾಗಿರದಿದ್ದರೂ ಅದನ್ನು ರದ್ದು ಪಡಿಸಲಾಗುತ್ತಿರಲಿಲ್ಲ.

(1) P Q R S

(2) Q S R P

(3) P R Q S

(4) R Q P S



www.shikarat.com

31. P. ದಶರಥನ ಕೀರ್ತಿಯಂತೆ ಬಿಳಿಯ ಭಸ್ಮರಾಶಿ ಶೋಭಿಸಿತು. ಎಲ್ಲರೂ ಚಿತೆಯನ್ನು ಪ್ರದಕ್ಷಿಣೆ ಮಾಡಿ ಸರಯೂ ನದಿಯ ತೀರಕ್ಕೆ ಬಂದರು.

Q. ಅಲ್ಲಿ ಜಲ ತರ್ಪಣವನ್ನು ನೀಡಿ ದುಃಖದಿಂದ ಶೂನ್ಯವನ್ನು ಪ್ರವೇಶಿಸುವ ಛಾಯೆಗಳಂತೆ ರಾಜಧಾನಿಯನ್ನು ಹೊಕ್ಕರು.

R. ಋತ್ವಿಜರು ದೊರೆಯ ದೇಹವನ್ನು ಸೂಡಿನ ಮೇಲಿಟ್ಟರು. ಗುರುವಿನ ಸನ್ನೆಯಂತೆ ಭರತ ಉರಿಯಿಕ್ಕಿದನು.

S. ರಾಣಿಯರ ರೋಧನ ಮತ್ತು ಋತ್ವಿಜರ ಸಾಮಗಾನದ ನಡುವೆ ಅಗ್ನಿ ಆಕಾಶದವರೆಗೂ ಹಬ್ಬಿತು.

(1) R S P Q

(2) P Q R S

(3) Q R P S

(4) S R Q P

**ಸೂಚನೆಗಳು :** ಕೆಳಗಿನ ಪದಗಳಿಗೆ (ಪ್ರಶ್ನೆಸಂಖ್ಯೆ 32-40) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರುತಿಸಿ.

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1)ನ್ನು ಗುರುತಿಸಬೇಕು.

32. "ಪರುವ" ಎಂದರೆ

(1) ಉತ್ಸವ

(2) ಪರುವು

(3) ಪರ್ವತ

(4) ಪರುಸ

33. ಪಱಮೆ ಎಂದರೆ

(1) ಹಸು

(2) ದುಂಬಿ

(3) ಕೋಗಿಲೆ

(4) ಗಿಳಿ

34. "ನವನೀತ" ಎಂದರೆ

(1) ನೀತಿ

(2) ಹೊಸನೀತಿ

(3) ಹೊಸದು

(4) ಬೆಣ್ಣೆ

35. "ಜಗಜಗಿಸು" ಎಂದರೆ

(1) ಜಗಮಗ

(2) ಪ್ರಕಾಶಿಸು

(3) ಹೋರಾಡು

(4) ಕೋಪಿಸಿಕೋ

www.shikarat.com

36. "ಮುನ್ನೀರು" ಎಂದರೆ

(1) ಬಿಸಿನೀರು

(2) ತಂಪುನೀರು

(3) ಸಮುದ್ರ

(4) ಸರೋವರ

37. "ಮೂರ್ತ" ಎಂದರೆ

(1) ಆಕಾರವಿಲ್ಲದ

(2) ಆಕಾರವಿರುವ

(3) ಒಳ್ಳೆಯ ಗಳಿಗೆ

(4) ಕೆಟ್ಟ ಗಳಿಗೆ

38. "ಮೃಷೆ" ಎಂದರೆ

(1) ಸುಳ್ಳು

(2) ನಿಜ

(3) ಮೃತ್ಯು

(4) ಮೆದು

39. "ವಜ್ರಧರ" ಎಂದರೆ

(1) ಹರ

(2) ಹರಿ

(3) ಬ್ರಹ್ಮ

(4) ಇಂದ್ರ

40. "ಶಿಬಿಕೆ" ಎಂದರೆ

(1) ಬೀಸಣಿಗೆ

(2) ಚಟ್ಟ

(3) ಬಾಚಣಿಗೆ

(4) ಬಂಡಿ

**ಸೂಚನೆ :** ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆಸಂಖ್ಯೆ 41-48) ವಿರುದ್ಧಾರ್ಥಕ ಪದಗಳನ್ನು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಿಂದ ಗುರುತಿಸಿ.

ಉದಾಹರಣೆ : ತೆಂಕಣ

(1) ಮೂಡಣ

(2) ಬಡಗಣ

(3) ಪಡುವಣ

(4) ತೆಂಕಣ

ಇಲ್ಲಿ "ತೆಂಕಣ" ಪದಕ್ಕೆ ವಿರುದ್ಧಾರ್ಥಕ ರೂಪ "ಬಡಗಣ" ಎಂಬುದು (2)ನ್ನು ಗುರುತಿಸಬಹುದು.

41. ಯೋಚನೆ

(1) ಆಲೋಚನೆ

(2) ದುರಾಲೋಚನೆ

(3) ನಿರ್ಯೋಚನೆ

(4) ಸಮಾಲೋಚನೆ

www.shikarat.com

42. ರವ

(1) ಕಲರವ

(2) ನೀರವ

(3) ಹೇರವ

(4) ಮಹಾರವ

43. ಗರತಿ

(1) ಅಗರತಿ

(2) ಕುಗರತಿ

(3) ಗಯ್ಯಾಳ

(4) ಬಾಡಿಕೋರಿ

44. ಊರ್ಜಿತ

(1) ಏಳ್ಗೆ

(2) ಅನೂರ್ಜಿತ

(3) ಅವೂರ್ಜಿತ

(4) ನಷ್ಟ

45. ಸ್ಥಾಪಕ

(1) ಅವಿನಾಶಕ

(2) ನುಂಗುವವ

(3) ಭಂಜಕ

(4) ಸ್ಥಾಪಿತ

46. ಆಕಸ್ಮಿಕ

(1) ಅಪೇಕ್ಷಿತ

(2) ಅಚಾನಕ್

(3) ಅವಕಾಶಿತ

(4) ನಿರೀಕ್ಷಿತ

47. ಸ್ವಾತಂತ್ರ್ಯ

(1) ಬಿಡುಗಡೆ

(2) ಬಂಧನ

(3) ಪಾರತಂತ್ರ್ಯ

(4) ಮೋಕ್ಷ

48. ನೇರ

(1) ಸುತ್ತುಬಳಸಿ

(2) ನೇರವಾಗಿ

(3) ನೇರವಿಲ್ಲದ್ದು

(4) ವಕ್ರ

www.shikarat.com

ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು (ಪ್ರಶ್ನೆಸಂಖ್ಯೆ 49-58) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.

ಉದಾಹರಣೆ : "ಬೆಣ್ಣೆ ಹಚ್ಚು"

(1) ರೊಟ್ಟಿಗೆ ಬೆಣ್ಣೆ ಹಚ್ಚು

(2) ಮೈಯುಜ್ಜುವುದು

(3) ಹೊಗಳುವುದು

(4) ಸೇವೆ ಮಾಡುವುದು

ಇಲ್ಲಿ 3 ಸರಿಯಾದ ಅರ್ಥ ಆದುದರಿಂದ (3)ನ್ನು ಗುರುತಿಸಬೇಕು.

49. ಅರ್ಧಚಂದ್ರ ಪ್ರಯೋಗ

(1) ಚಂದ್ರನ ಪ್ರಯೋಗ

(2) ಚಂದ್ರನ ಅರ್ಧದ ಪ್ರಯೋಗ

(3) ಹೊರಗೆ ಕಳುಹಿಸುವುದು

(4) ಕುತ್ತಿಗೆ ಹಿಡಿದು ನೂಕುವುದು

50. "ಕಣ್ಣಲ್ಲಿ ಜೀವವಿಟ್ಟುಕೊಂಡು"

(1) ಕಣ್ಣಲ್ಲಿ ಜೀವಹೋಗು

(2) ಕಣ್ಣು ತೆರೆದುಕೊಂಡು ಸಾಯಿ

(3) ತುಂಬಾ ಆಸೆಯಿಟ್ಟುಕೊಂಡು

(4) ಕಣ್ಣಲ್ಲಿ ತುಂಬಾ ನೋವು

51. "ಮೈಯೆಲ್ಲಾ ಕಣ್ಣಾಗು" ಎಂದರೆ

(1) ದೇಹದಲ್ಲೆಲ್ಲಾ ಕಣ್ಣು

(2) ಬಹಳ ನಿದ್ದೆಗೆಟ್ಟುಕೊಂಡು

(3) ತುಂಬಾ ಜಾಗರೂಕನಾಗಿರು

(4) ಬಹಳ ಧೈರ್ಯವಾಗಿರು

52. "ಏಳು ಕೆರೆ ನೀರು ಕುಡಿಸು"

(1) ಏಳು ಕೆರೆ ನೀರನ್ನು ಕುಡಿಸು

(2) ಏಳು ಊರುಗಳ ನೀರು ಕುಡಿಸು

(3) ಬಹಳ ಕಷ್ಟ ಕೊಡು

(4) ನೀರು ಕೊಡದೆ ಸಾಯಿಸು

53. "ಕೂಪ ಮಂಡೂಕ"

(1) ಹೊಸ ಬಾವಿ

(2) ಸಂಕುಚಿತ ಮನಸ್ಸಿನವ

(3) ವಿಶಾಲ ಮನಸ್ಸಿನವ

(4) ಹಳೆಯ ಬಾವಿ

54. ಗಳಸ್ಯ-ಕಂಠಸ್ಯ

(1) ಒಳ್ಳೆಯ ಕಂಠ

(2) ಕುತ್ತಿಗೆಯ ತನಕ

(3) ಕಿವುಡ

(4) ಅತಿ ಆತ್ಮೀಯತೆ



www.shikarat.com

55. ಉಷಃ ಕಾಲ ಎಂದರೆ

(1) ಮುಂಜಾನೆಯ ಸಮಯ

(2) ಸಂಜೆಯ ಸಮಯ

(3) ವಿಷಮ ಕಾಲ

(4) ಸುಖದ ಕಾಲ

56. ಕಣ್ಮಣಿ

(1) ಅಚ್ಚುಮೆಚ್ಚಿನ

(2) ಕಣ್ಣಿನ ಮಣಿ

(3) ಕಲಪದ ಮಣಿ

(4) ಕರುಣೆಯ ಮಣಿ

57. "ಅಜಗಜಾಂತರ"ವೆಂದರೆ

(1) ಆರು ಗಜದ ಅಳತೆ

(2) ಆರು ಅಡಿ

(3) ಅಜ ಮತ್ತು ಗಜಗಳ ಅಳತೆ

(4) ಆಡು-ಆನೆಯಷ್ಟು ವ್ಯತ್ಯಾಸ

58. ಉತ್ಸವ ಮೂರ್ತಿ

(1) ಉತ್ಸವಕ್ಕಾಗಿ ತಂದ ಮೂರ್ತಿ

(2) ಉಡುಪಿಯ ಕೃಷ್ಣಮೂರ್ತಿ

(3) ಸದಾ ತಿರುಗಾಡುತ್ತಾ ಮೆರೆಯುವ ಸ್ವಭಾವದವ

(4) ಅಲಂಕಾರದ ಗೊಂಬೆ

**ಸೂಚನೆ :** ಈ ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆಸಂಖ್ಯೆ 59-64) ಒಂದು ಪದ ಉಳಿದವುಗಳ ಗುಂಪಿಗೆ ಸೇರುವುದಿಲ್ಲ ಅಂತಹ ಪದ ಗುರುತಿಸಿ.

ಉದಾಹರಣೆ:

(1) ಹುಡುಗಿ

(2) ನವಿಲು

(3) ಗಿಳಿ

(4) ಕಿತ್ತಳೆ

ಇಲ್ಲಿ "ಕಿತ್ತಳೆ" ಇತರ ಪದಗಳ ಜಾತಿಗೆ ಸೇರುವುದಿಲ್ಲ ಆದುದರಿಂದ (4)ನ್ನು ಗುರುತಿಸಬೇಕು.

59. (1) ಸಸಿ

(2) ಮರ

(3) ಗಿಡ

(4) ಬಳ್ಳಿ

60. (1) ವಿಶ್ವೇಶ್ವರಯ್ಯ

(2) ಅಬ್ದುಲ್ ಕಲಾಂ

(3) ಸಿ.ಎನ್.ಆರ್.ರಾವ್

(4) ಎಸ್.ಎಲ್.ಭೈರಪ್ಪ

61. (1) ಆರೋಪ

(2) ಪ್ರತ್ಯಾರೋಪ

(3) ವಿಧಾನ

(4) ದೂರು



www.shikarat.com

62. (1) ಲಾರಿ
(2) ಬಸ್ಸು
(3) ಕಾರು
(4) ರೈಲು

63. (1) ಕುವೆಂಪು
(2) ಬೇಂದ್ರೆ
(3) ಮಾಸ್ತಿ
(4) ಲಂಕೇಶ

64. (1) ಆಂದೋಲನ
(2) ಅನುಭಾವ
(3) ಕ್ರಾಂತಿ
(4) ಸುಧಾರಣೆ

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯರೂಪಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ ತಪ್ಪಿಲ್ಲದಿದ್ದರೆ "ತಪ್ಪಿಲ್ಲ" ಎಂಬ (4)ನ್ನು ಗುರುತಿಸಿ (ಪ್ರಶ್ನೆಸಂಖ್ಯೆ 65-71)

ಉದಾಹರಣೆ : ಲೋಕಾಯುಕ್ತ ಲಂಚ ಹಗುರಣಕ್ಕೆ ಸಂಬಂಧಿಸಿ ಎಂಟು ಜನರ ಬಂಧನ
(1) ಹಾಗರಣ
(2) ಹಗರಣ
(3) ಹಗರನ
(4) ಹಗರಾಣ

ಇಲ್ಲಿ ಗೆರೆ ಎಳೆದ "ಹಗುರಣ" ತಪ್ಪಾಗಿದ್ದು ಅದರ ಸರಿಯಾದ ರೂಪವು ಹಗರಣ" ಎಂದಾಗಿದೆ ಅದರಿಂದ (2)ನ್ನು ಗುರುತಿಸಬೇಕು.

65. ವಿಶ್ವಮಾನವ ಸಂದೇಶದ ಪ್ರಚಾರ ಮತ್ತು ಪ್ರಸಾರ ಅತ್ಯಂತ ತುರ್ತಾಗಿ ಆಗಬೇಕಿದೆ.
(1) ತುರ್ಥಾಗಿ
(2) ಥುರ್ತಾಗಿ
(3) ತುರ್ತ್ತಾಗಿ
(4) ತಪ್ಪಿಲ್ಲ

66. ಅಧಿಕಾರದಲ್ಲಿರುವವರಿಗೆ ಯೋಜನೆಗಳನ್ನು ಘೋಶಣೆ ಮಾಡುವುದು ಒಂದು ಹವ್ಯಾಸವಾಗಿದೆ.
(1) ಗೋಷಣೆ
(2) ಘೋಷಣೆ
(3) ಘೊಷಣೆ
(4) ತಪ್ಪಿಲ್ಲ

67. ವಿದ್ಯಾರ್ಥಿಗಳಿಗೆ ಚಿತ್ತೇಕಾಗ್ರತೆ ತುಂಬಾ ಮುಖ್ಯ
(1) ಚಿತ್ತೈಕಾಗ್ರತೆ
(2) ಚಿತ್ತಾಕಾಗ್ರತೆ
(3) ಚಿತ್ತ್ರೈಕಾಗ್ರತೆ
(4) ತಪ್ಪಿಲ್ಲ

68. ಸಂಸ್ಕೃತಿಯು ಪ್ರತಿಯೊಂದು ಆಚರಣೆಯನ್ನು ತರ್ಕಬದ್ಧ ವ್ಯವಸ್ಥಿತ ಅಧ್ಯಯನಕ್ಕೊಳಪಡಿಸುತ್ತದೆ.

(1) ವ್ಯವಸ್ತಿತ

(2) ವ್ಯವಸ್ಥಿತ

(3) ವ್ಯವಸ್ತಿತಾ

(4) ತಪ್ಪಿಲ್ಲ

69. ಆಡಳಿತದ ಮಾದರಿಗಳಲ್ಲಿ ಪ್ರಜಾಧಿಪತ್ಯವೇ ಆದರ್ಶವಾದುದು

(1) ಪ್ರಜಾದಿಪತ್ಯ

(2) ಪ್ರಜಾದಿಪಥ್ಯ

(3) ಪ್ರಜಾದಿ ಪತ್ಯ

(4) ತಪ್ಪಿಲ್ಲ

70. ಪ್ರತಿಯೊಬ್ಬ ವ್ಯಕ್ತಿಯೂ ಸಹ ವಸ್ತುಸ್ತಿತಿ ಯನ್ನರಿತು ಮಾತನಾಡಬೇಕು.

(1) ವಸ್ತುಸ್ಥಿತಿ

(2) ವಸ್ತುಸ್ಥಿತಿ

(3) ವಸ್ತುಸ್ತಿಥಿ

(4) ತಪ್ಪಿಲ್ಲ

71. ಭಾರತೀಯ ಸಂಸ್ಕೃತಿ ತುಂಬಾ ವೈವಿಧ್ಯತೆ ಯಿಂದ ಕೂಡಿದೆ.

(1) ವೈವಿಧ್ಯತೆ

(2) ವೈವಿಧ್ಯಥೆ

(3) ವಿವಿದ

(4) ತಪ್ಪಿಲ್ಲ

**ಸೂಚನೆ :** ಖಾಲಿ ಬಿಟ್ಟಿರುವ ಜಾಗಕ್ಕೆ ಸರಿಯಾದ ಉತ್ತರವನ್ನು ಗುರುತಿಸಿ. (ಪ್ರಶ್ನೆಸಂಖ್ಯೆ 72-96)

ಉದಾಹರಣೆ : ನಡೆಯುತ್ತಿದೆ ಎಂಬುದು ____ ದ ಪದ

(1) ಭೂತಕಾಲ

(2) ವರ್ತಮಾನ ಕಾಲ

(3) ಭವಿಷ್ಯತ್ ಕಾಲ

(4) ಹಿಂದಿನ ಕಾಲ

ಇಲ್ಲಿ "ವರ್ತಮಾನಕಾಲ" ಎಂಬುದು ಸರಿಯಾದ ಉತ್ತರ ಆದುದರಿಂದ (2)ನ್ನು ಗುರುತಿಸಬೇಕು.

72. ಭಾಷೆಯ ಅತ್ಯಂತ ಚಿಕ್ಕ ಘಟಕವೆಂದರೆ ___

(1) ಪದ

(2) ವಾಕ್ಯ

(3) ನಾಮಪದ

(4) ಧ್ವನಿ

73. ದ್ರಾವಿಡ ಭಾಷೆಗಳಲ್ಲಿ ಅತಿ ಪ್ರಾಚೀನವಾದ ಭಾಷೆ

(1) ಕನ್ನಡ

(2) ಮಲೆಯಾಳಂ

(3) ತಮಿಳು

(4) ತೆಲುಗು


www.shikarat.com

74. "ಹೊರಡು" ಎಂಬುದು ----

(1) ನಾಮಪದ

(2) ಕ್ರಿಯಾಪದ

(3) ಕ್ರಿಯಾಪ್ರಕೃತಿ

(4) ವಿಶೇಷಣ

75. ಆ ಮರದ ಮೇಲೆ ಒಂದು ಹಕ್ಕಿ ಕುಳಿತಿದೆ ಎಂಬುದು ---- ವಾಕ್ಯ.

(1) ವೈಷಯಿಕ ವಾಕ್ಯ

(2) ಕ್ರಿಯಾರ್ಥವಾಕ್ಯ

(3) ಪ್ರಸ್ತಾವನಾ ವಾಕ್ಯ

(4) ನಿಷೇಧಾರ್ಥಕ ವಾಕ್ಯ

76. ಬಲಶಾಲಿಯಾದ ಭೀಮನು ದುರ್ಯೋಧನ ನನ್ನು ಕೊಂದನು ಇಲ್ಲಿ "ಭೀಮನು" ಎಂಬುದು ---

(1) ವಿಶೇಷಣ

(2) ವಿಶೇಷ್ಯ

(3) ಪ್ರಕೃತಿ

(4) ಪ್ರತ್ಯಯ

77. "ಹಣದಾಸೆಗೆ" ಎಂಬ ಪದದಲ್ಲಿ --- ಸಂಧಿಯಿದೆ

(1) ಸವರ್ಣ ದೀರ್ಘ

(2) ಆದೇಶ

(3) ಲೋಪ

(4) ಆಗಮ

78. "ಮಗುವಿಗೆ" ಎಂಬ ಪದದಲ್ಲಿ ---- ಸಂಧಿಯಿದೆ

(1) ಲೋಪ

(2) ಆಗಮ

(3) ಯಣ್

(4) ಗುಣಸಂಧಿ

79. "ಹುಲ್ಲುಗಾವಲು" ಎಂಬ ಪದದಲ್ಲಿ ---- ಸಂಧಿಯಿದೆ

(1) ವೃದ್ಧಿ

(2) ಗುಣ

(3) ಲೋಪ

(4) ಆದೇಶ

80. "ತಾನು" ಎಂಬುದು ---- ಸರ್ವನಾಮ

(1) ಪ್ರಥಮ ಪುರುಷ

(2) ಉತ್ತಮ ಪುರುಷ

(3) ಮಧ್ಯಮ ಪುರುಷ

(4) ಆತ್ಮಾರ್ಥಕ

81. "ದೊಡ್ಡವರು" ಎಂಬುದು ----- ವಚನ

(1) ಏಕವಚನ

(2) ಬಹುವಚನ

(3) ಪುಂಸ್ತ್ರೀ ಬಹುವಚನ

(4) ದ್ವಿವಚನ

www.shikarat.com

82. "ಮಾಡಿರಿ" ಎಂಬುದು _____ ಪದ

(1) ವಿದ್ಯರ್ಥಕ

(2) ಇಚ್ಛಾರ್ಥಕ

(3) ಸಂಭಾವನಾರ್ಥಕ

(4) ಸಂದೇಹಾರ್ಥಕ

83. "ನೆನೆಯರು" ಎಂಬುದು _____ ಪದ

(1) ವಿದ್ಯರ್ಥಕ

(2) ನಿಷೇದಾರ್ಥಕ

(3) ಸಂಭವನಾರ್ಥಕ

(4) ಪ್ರೇರಣಾರ್ಥಕ

84. "ಇದ್ದಾನು" ಎಂಬುದು ____ ಪದ

(1) ಸಂದೇಹಾರ್ಥಕ

(2) ಪ್ರೇರಣಾರ್ಥಕ

(3) ಇಚ್ಛಾರ್ಥಕ

(4) ಸಂಭಾವನಾರ್ಥಕ

85. "ನಕ್ಕವನು" ಎಂಬುದು_____ ಪದ

(1) ಕೃದಂತನಾಮ

(2) ಭಾವನಾಮ

(3) ತದ್ಧಿತಾಂತ

(4) ಗುಣವಾಚಕ

86. "ಚಾಡಿಕೋರ" ಎಂಬುದು_____ನಾಮ

(1) ತದ್ಧಿತಾಂತ

(2) ಕೃದಂತ

(3) ಭಾವನಾಮ

(4) ಕೃದಂತ ಭಾವ

87. ಹಗಲು ಕನಸು ಎಂಬುದು ____ ಸಮಾಸ

(1) ಕರ್ಮಧಾರಯ

(2) ಅಂಶಿ

(3) ತತ್ಪುರುಷ

(4) ದ್ವಿಗು

88. "ಸಿಡಿಮದ್ದು" ಎಂಬುದು ____ ಸಮಾಸ

(1) ದ್ವಂದ್ವ

(2) ತತ್ಪುರುಷ

(3) ಕರ್ಮಧಾರಯ

(4) ಬಹುವ್ರೀಹಿ

89. "ಕೆಳದುಟಿ" ಎಂಬುದು ____ ಸಮಾಸ

(1) ಅಂಶಿ

(2) ದ್ವಂದ್ವ

(3) ದ್ವಿಗು

(4) ಕರ್ಮಧಾರೆಯ

www.shikarat.com

90. "ಕಥೆಹೇಳು" ಎಂಬುದು ---- ಸಮಾಸ

(1) ದ್ವಿಗು

(2) ಬಹುವ್ರೀಹಿ

(3) ಅಂಶಿ

(4) ಕ್ರಿಯಾ

91. ------- ಎಂಬುದು ಅವಧಾರಣೆಯಿಂದ ಕೂಡಿದ ಪದ

(1) ನಾನು

(2) ನಾನೂ

(3) ನಾನೇ

(4) ನಾನೋ

92. ಆ ಸುದ್ಧಿಯನ್ನು ಕೇಳ ನಾನು ಮೈಸೂರಿಗೆ ಕೂಡಲೆ ಹಿಂತಿರುಗಿದೆನು ಇಲ್ಲ <u>ಕೂಡಲೇ</u> ಎಂಬುದು

(1) ಅನುಸರ್ಗಾವ್ಯಯ

(2) ಸಾಮಾನ್ಯಾವ್ಯಯ

(3) ಸಂಬಂಧ ಸೂಚಕಾವ್ಯಯ

(4) ಭಾವಸೂಚಕಾವ್ಯಯ

93. ಆಹಾ. ನೀರು ಅಮೃತದಂತಿದೆ ಇಲ್ಲ <u>ಆಹಾ</u> ಎಂಬುದು

(1) ಸಾಮಾನ್ಯಾವ್ಯಯ

(2) ಅನುಸರ್ಗಾವ್ಯಯ

(3) ಸಂಬಂಧ ಸೂಚಕಾವ್ಯಯ

(4) ಭಾವಸೂಚಕಾವ್ಯಯ

94. ಮಗು ಕುಣಿಯುತ್ತಾ ಬೀದಿಗೆ ಹೋಯಿತು ಇಲ್ಲ ಕುಣಿಯುತ್ತಾ ---- ಪದ

(1) ನಾಮಪದ

(2) ಕ್ರಿಯಾ ಪದ

(3) ಸಾಪೇಕ್ಷ ಕ್ರಿಯಾಪದ

(4) ನಾಮ ಪ್ರಕೃತಿ

95. ನೀವು ಬುದ್ಧಿವಂತರಾಗಿ ಬಾಳಿ ಇಲ್ಲ "ಬುದ್ಧಿವಂತರಾಗಿ" ಎಂಬುದು

(1) ನಾಮಪದ

(2) ಕ್ರಿಯಾಪದ

(3) ಕ್ರಿಯಾ ವಿಶೇಷಣ

(4) ಭಾವನಾಮ

96. "ಅಂಥದು" ಎಂಬ ಪದ ---- ವಾಚಕ

(1) ಸಂಖ್ಯಾವಾಚಕ

(2) ಪರಿಮಾಣ ವಾಚಕ

(3) ಪ್ರಕಾರ ವಾಚಕ

(4) ದಿಗ್ವಾಚಕ

**ಸೂಚನೆ** : ಕೆಳಗಿನ ಪ್ರಶ್ನೆಗಳಲ್ಲಿ (ಪ್ರಶ್ನೆಸಂಖ್ಯೆ 97-100) ಕನ್ನಡ ಮೂಲದ್ದು ಅಲ್ಲದ (ಅನ್ಯಭಾಷೆಯಿಂದ ಸ್ವೀಕೃತವಾದ) ಶಬ್ದವನ್ನು ಗುರುತಿಸಿ.

ಉದಾಹರಣೆ :

(1) ದಾರಿ

(2) ಹಾದಿ

(3) ರಸ್ತೆ

(4) ಕಾಡು

ಈ ನಾಲ್ಕು ಪದಗಳಲ್ಲಿ "ರಸ್ತೆ" ಮಾತ್ರ ಅನ್ಯಭಾಷೆಯಿಂದ ಸ್ವೀಕೃತವಾದ ಪದವಾಗಿದೆ ಆದುದರಿಂದ ಇಲ್ಲಿ (3)ನ್ನು ಗುರುತಿಸಬೇಕು.

www.shikarat.com

97. (1) ಮನೆ

(2) ಹೊಲ

(3) ಗದ್ದೆ

(4) ನದಿ

98. (1) ಹೀರು

(2) ಬೀದಿ

(3) ಸಾರು

(4) ಕಾರು

99. (1) ಕದ

(2) ಕಾಗದ

(3) ಹೊಲಿ

(4) ನೆಲ

100. (1) ಮೆಲ್ಲಗೆ

(2) ಸುಮ್ಮನೆ

(3) ಬದಲು

(4) ಕಲ್ಲು

www.shikarat.com